ನಿಯಮ 334ರ ಮೇರೆಗೆ

1) ವಿಶ್ವೇಶ್ವರಯ್ಯ ನಾಲೆಯ ಮದ್ದೂರು ಶಾಖೆಯ 7.10 ಮತ್ತು 15 ಕಿ.ಮಿ. ಹತ್ತಿರದ ಸೇತುವೆಗಳ ಕಾಮಗಾರಿ ಕೆಲಸ.

ಶ್ರೀ ಎನ್. ತಮ್ಮಣ್ಣ (ಕೆರೆಗೋಡು) : ಮಾನ್ಯ ಅಧ್ಯಕ್ಷರೆ, ವಿಶ್ವೇಶ್ವರಯ್ಯ ನಾಲೆಯ ಮದ್ದೂರು ಶಾಖೆಯ 7ನೇ ಕಿಲೋಮೀಟರ್ ದುದ್ದ ಪಟಾಲಮ್ಮನ ದೇವಸ್ಥಾನದ ಹತ್ತಿರ ಅದೇ ಶಾಖೆಯ 10ನೇ ಕಿಲೋಮೀಟರ್ ಸೌದೇನಹಳ್ಳಿ ಗ್ರಾಮದ ಹತ್ತಿರ ಮತ್ತು 15ನೇ ಕಿಲೋಮೀಟರ್ ಗುನ್ನಾಯ್ಕನಹಳ್ಳಿ ಗ್ರಾಮದ ಹತ್ತಿರ ಮೂರು ಸೇತುವೆಗಳ ಕಾಮಗಾರಿ ಕೆಲವು ಸುಮಾರು 5 ವರ್ಷಗಳಿಂದ ಕಾಲುವೆಯ ನೀರಿನ ಮಟ್ಟಕ್ಕೆ ನಿಂತಿರುತ್ತದೆ. ಈ ಕಾಮಗಾರಿ ಕೆಲಸವು ವಿಶ್ವೇಶ್ವರಯ್ಯ ನಾಲೆ ಆಧುನೀಕರಣಕ್ಕೊಳಪಟ್ಟಿರುತ್ತದೆ. ಈಗ ಹಾಲಿ ಇರತಕ್ಕ ಸೇತುವೆಗಳು ಶಿಥಿಲವಾಗಿದ್ದು ಯಾವಾಗಲಾದರೂ ಬಿದ್ದುಹೋಗುವ ಸಂಭವವಿರುತ್ತದೆ. ಈ ಸೇತುವೆಗಳ ಸಂಪರ್ಕವು ತಾಲ್ಲೂಕಿನಿಂದ ತಾಲ್ಲೂಕಿಗಿರುವುದರಿಂದ ಮತ್ತು ಸಾರಿಗೆ ಓಡಾಟ ಹೆಚ್ಚಿಗೆ ಇರುವುದರಿಂದ ಅದಷ್ಟು ಬೇಗ ಈ ಮೂರು ಸೇತುವೆಗಳ ಕಾಮಗಾರಿ ಕೆಲಸವು ಬೇಗ ಮುಗಿಯ ಬೇಕಾಗಿರುತ್ತದೆ. ಆದ್ದರಿಂದ ಈ ಕೆಲಸಗಳನ್ನು ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಅಜೀಜ್ ಸೇಠ್ : ನನ್ನದೊಂದು 334ನೇ ಸೂಚನೆ ಇದೆ. ನನಗೆ ಮಧ್ಯಾಹ್ನ ಒಂದು ಮೀಟಿಂಗ್ ಇರುವುದರಿಂದ ಅದನ್ನು ಮೊದಲು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ನಂತರ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ : (ಮುಖ್ಯಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೇ,

ವಿಧಾನ ಸಭಾ ಸದಸ್ಯರಾದ ಶ್ರೀ ಎನ್. ತಮ್ಮಣ್ಣ ಅವರು ನಿಯಮ 334ರ ಅಡಿಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಮದ್ದೂರು ಶಾಖೆಯ 7ನೇ, 10ನೇ ಮತ್ತು 15ನೇ ಕಿ.ಮೀ. ಗಳಲ್ಲಿನ ಸೇತುವೆಗಳ ದುರಸ್ತಿಯ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ವಿಶ್ವೇಶ್ವರಯ್ಯ ನಾಲೆಯ 7ನೇ, 9ನೇ ಮತ್ತು 13ನೇ ಕಿ.ಮೀ.ಯಲ್ಲಿ (ದುದ್ದಪಟಾಲಮ್ಮನ ದೇವಸ್ಥಾನದ, ಸೌದೇನ ಹಳ್ಳಿ ಗ್ರಾಮದ ಮತ್ತು ಗುನ್ನಾಯ್ಕನ ಹಳ್ಳಿ ಗ್ರಾಮದ ಹತ್ತಿರ ಇರುವ) ಮೂರು ಸೇತುವೆಗಳು ದುರಸ್ತಿ ಮಾಡುವ ಪರಿಸ್ಥಿತಿಯಲ್ಲಿದ್ದು ಇವುಗಳ ದುರಸ್ತಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿ ಕೆಲಸವನ್ನು ಪ್ರಾರಂಭಿಸಲಾಗಿದೆ. ಸದರಿ ನಾಲೆಯ 10 ಮತ್ತು 15 ನೇ ಕಿ.ಮೀ.ಗಳಲ್ಲಿ ಸೇತುವೆಗಳು ಇರುವುದಿಲ್ಲ.

ಮೇಲೆ ತಿಳಿಸಿದ ಮೂರು ಸೇತುವೆಗಳ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಈ ನಾಲೆಯಲ್ಲಿ ನೀರು ನಿಲ್ಲಿಸುವ ಅವಧಿಯು ಕಡಿಮೆ ಆದ ಕಾರಣ ದುರಸ್ತಿ ಕಾಮಾಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿಲು ಸಾಧ್ಯವಾಗದೆ ಇದ್ದುದರಿಂದ ಮೂರು ಕಾಮಗಾರಿಗಳ ಗುತ್ತಿಗೆದಾರರು ಕೆಲಸಗಳನ್ನು ಕೈ ಬಿಟ್ಟು ಹೋಗಿದ್ದಾರೆ.ಈ ಕಾಮಗಾರಿಗಳನ್ನು ಇಲಾಖಾ ವತಿಯಿಂದಲೇ ಮುಂದುವರಿಸಿ 1991-92ರ ನೇ ಸಾಲಿನಲ್ಲಿ ಕೆಲಸಗಳನ್ನು ಪೂರ್ಣಗೊಳಿಸಿ ಇವುಗಳ ಮೂಲಕ ಸಾರಿಗೆ ಓಡಾಟ ಮೊದಲಿನ ಪರಿಸ್ಥಿತಿಗೆ ತರುವಂತೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

2.) ಸಿಂಧಗಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ನಿರ್ಮಾಣ ಕಾರ್ಯ

ಶ್ರೀ ಆರ್. ಬಿ. ಚೌಧರಿ (ಸಿಂಧಗಿ) : ಮಾನ್ಯ ಅಧ್ಯಕ್ಷರೇ, ಸಿಂಧಗಿಯಲ್ಲಿ ಕೆಎಸ್ಆರ್‌ಟಿಸಿ ಡಿಪೋ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತು ಸುಮಾರು 2

ವರ್ಷವಾಯಿತು. 1 ವರ್ಷದಿಂದ ಎಷ್ಟು ಪ್ರಯತ್ನಿಸಿದರೂ ಕಾರ್ಯಪ್ರಾರಂಭವಾಗುವ ಲಕ್ಷಣಗಳಿಲ್ಲ. ಹಾಗೂ ಅಧಿಕಾರಿಗಳು ಮಾರ್ಚ್ 1991 ರಲ್ಲಿ ಮುಗಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಈ ಭರವಸೆ ಕೆಲಸ ಭರವಸೆಯಾಗಿಯೇ ಉಳಿಯಿತು. ಆದ್ದರಿಂದ ಸರ್ಕಾರ ಈಗಲಾದರೂ ಹಿಂದುಳಿದ ಪ್ರದೇಶವಾದ ಸಿಂದಗಿ ಬಗ್ಗೆ ಕಾಳಜಿ ವಹಿಸಿ ಡಿಪೋ ಕಾರ್ಯ ಮುಗಿಸುವಲ್ಲಿ ಮುತುವರ್ಜಿವಹಿಸುವುದೇ?

SRI AZEEZ SAIT (Minister for Transport and Walkfs) : Madam Deputy Speaker, The Construction of a Bus Depot at Sindagi at an estimated cost of Rs. 43.80 lakhs has been approved. The work has been entrused to Karnataka State Construction Corporation and the work is under progress. The foundation work of the main Depot has already been completed, and the brick work is being taken up. The other sub-works are in the finishing stage. The reason for the delay for construction of the main depot building is that high tension electricity line has crossed over the Depot building. The Karnataka Electricity Board has already been requested to shift this line. As soon as the high tension line is shifted, the karnataka State Construction Corportion will take up construction work of the main building and complete it with in 31-10-91 as agreed to.

The KSRTC has already paid about Rs. 15.00 lakhs to the karnataka State construction Corporation in this behalf. apart from this, the Managing Director, karnataka state construction corporation has been requested to get the construction work completed at the earliest.

3) ಕನಕಪುರ ಟೌನ್‌ಗೆ ಕುಡಿಯುವ ನೀರಿನ ಸೌಕರ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಕನಕಪುರ ಟೌನ್‌ನಲ್ಲಿ ಕುಡಿಯುವ ನೀರಿಗೆ ತೀರಾ ತೊಂದರೆ ಆಗಿದ್ದು. ನೀರಿನ ಹಂಚಿಕೆ ಪುರಸಭೆ ವತಿಯಿಂದ ಸರಿಯಾಗಿ ಆಗುತ್ತಿಲ್ಲ. ಶಾಶ್ವತವಾಗಿ ಕನಕಪುರದ ಕುಡಿಯುವ ನೀರಿನ ತೊಂದರೆ ಬಗೆಹರಿಸಲು, ಬಿಡಬ್ಲ್ಯುಎಸ್‌ಎಸ್‌ಬಿನ ಕಾವೇರಿ 3ನೇ ಹಂತದ ಯೋಜನೆಯಲ್ಲಿ ನೀರನ್ನು ಕೊಡಲು ಒತ್ತಾಯಿಸುತ್ತೇನೆ. ತುರ್ತಾಗಿ 15 ಕೊಳವೆ ಬಾವಿಗಳನ್ನು ತೋಡಲು ವಿನಂತಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1981ನೇ ಜನಗಣತಿಯ ಪ್ರಕಾರ ಕನಕಪುರ ಪಟ್ಟಣದ ಜನಸಂಖ್ಯೆ 30161 ಆಗಿದ್ದು, ಪ್ರಸ್ತುತ ಜನಸಂಖ್ಯೆಯು ಸುಮಾರು 35,000 ಇರಬಹುದು. ಈ ಪಟ್ಟಣದ ಹಾಲಿ ನೀರು ಸರಬರಾಜು ಯೋಜನೆಯು ಅರ್ಕಾವತಿ ನದಿಯ ದಡದಲ್ಲಿ ನಿರ್ಮಿಸಿರುವ ಒಂದು ಇನ್‌ಫಿಲ್ಟ್ರೇಷನ್ ಬಾವಿಯ ಮೂಲಕ ಮತ್ತು 16 ಕೊಳವೆ ಬಾವಿಗಳಿಗೆ ವಿದ್ಯುತ್‌ಚಾಲಿತ ಪಂಪುಗಳನ್ನು ಅಳವಡಿಸಿರುವುದರ ಮೂಲಕ ಸರಬರಾಜು ಮಾಡಲಾಗುತ್ತಿದೆ. ಈ ಮೂಲಗಳಿಂದ ತಲಾ ದಿನಂಪ್ರತಿ 40 ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಈ ಪಟ್ಟಣದಲ್ಲಿ ಜನತೆಗೆ ಬೇಕಾದಷ್ಟು ನೀರನ್ನು ಶೇಖರಿಸಲು ಅನುಕೂಲತೆ ಇಲ್ಲಿದಿರುವುದರಿಂದ ವಿದ್ಯುತ್ ಯಂತ್ರಗಳ ಜೋಡಣೆ ಮಾಡಿರುವ ಕೊಳವೆ ಬಾವಿಗಳನ್ನು ನೇರವಾಗಿ ವಿತರಣಾ ವ್ಯವಸ್ಥೆಗೆ ಸಂಪರ್ಕಿಸಲಾಗಿದೆ. ಹೊಸ ಬಡಾವಣೆಗಳಲ್ಲಿ ಹೊಸದಾಗಿ ವಿತರಣಾ ವ್ಯವಸ್ಥೆಯನ್ನು ಅಳವಡಿಸುವುದು ಅವಶ್ಯಕತೆ ಇದೆ ಮತ್ತು ಹೆಚ್ಚಿನ ಕೊಳವೆ ಬಾವಿಯ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಅವುಗಳನ್ನು ಪಂಪಿಗೆ